**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು–ಮಡಿಕೇರಿ**

**ಎಸ್.ಸಿ ಸಂಖ್ಯೆ: 15/2025**

ಪ್ರಾಸಾಃ 3

ಚಾಸಾಃ 4

ಸಾಕ್ಷಿದಾರರ ಹೆಸರು : ಸಂತೋಶ್

ತಂದೆಯ ಹೆಸರು : ಲೇಟ್ ಧರ್ಮಪ್ಪ

ವಯಸ್ಸು : 33 ವರ್ಷ

ವೃತ್ತಿ : ಕೂಲಿ ಕೆಲಸ

ವಾಸ : ಶಾಂತಳ್ಳಿ

**ಸಾಕ್ಷಿಯನ್ನು ದಿನಾಂಕ 03–02–2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಮೃತ ಕಾವೇರಿ ನಮ್ಮ ಊರಿನವರು. ಮೃತ ಕಾವೇರಿಗೆ ಆರೋಪಿ ಮಗ. ಮೃತ ಕಾವೇರಿ ರವರ ಗಂಡ ಸುಬ್ಬಯ್ಯ ಏನು ಕರ್ತವ್ಯ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅವರು ಹತ್ತು ವರ್ಷದ ಹಿಂದೆ ಮೃತರಾಗಿರುತ್ತಾರೆ. ಅವರಿಬ್ಬರಿಗೂ ಇಬ್ಬರು ಮಕ್ಕಳು, ಅವರು ಆರೋಪಿ ಮತ್ತು ಇನ್ನೊಬ್ಬ ಮೃತ ಈಶ್ವರ. ಮೃತ ಕಾವೇರಿ ಮೃತಳಾಗುವುದಕ್ಕಿಂತ ಮುಂಚೆ ಆರೋಪಿಯೊಂದಿಗೆ ಒಟ್ಟಿಗೆ ವಾಸವಿದ್ದು, ಅವರ ಸಂಬಂಧ ಚೆನ್ನಾಗಿತ್ತು. ಸುಮಾರು ಒಂದೂವರೆ ವರ್ಷದ ಹಿಂದೆ ಕಾವೇರಿ ಅವರ ಮನೆಯಲ್ಲಿ ಮೃತಳಾಗಿರುತ್ತಾಳೆ. ಸಾವಿಗೆ ಕಾರಣ ನನಗೆ ಗೊತ್ತಿಲ್ಲ. ಮೃತಳಾದ ಮರುದಿನ ಮಧ್ಯಾಹ್ನ 12.00 ಗಂಟೆಗೆ ನಾನು ಅವರ ಮನೆಗೆ ಹೋಗಿರುತ್ತೇನೆ, ಆ ಸಮಯಕ್ಕೆ ಗ್ರಾಮಸ್ಥರು ಮತ್ತು ಸಂಬಂಧಿಕರು ಬಂದಿದ್ದರು, ಆರೋಪಿಯೂ

ಇದ್ದನು. ಎಲ್ಲರನ್ನು ವಿಚಾರಿಸಿದಾಗಿಯೂ ಸಹ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ತದನಂತರ ಪೊಲೀಸರು ಶಾಂತಳ್ಳಿ ಗ್ರಾಮದ ಕಾವೇರಿರವರ ಮನೆಗೆ ಬಂದಿದ್ದು, ಆ ಸಮಯಕ್ಕೆ ನನ್ನಿಂದ ಎರಡು ದಾಖಲೆಗೆ ಸಹಿ ಪಡೆದರು. ಅದು ಯಾವ ದಾಖಲೆ, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಎರಡು ದಾಖಲೆಗಳನ್ನು ಸಾಕ್ಷಿಗೆ ಈಗ ತೋರಿಸಲಾಗಿ, ಅವುಗಳನ್ನು ಈಗಾಗಲೇ ನಿಪಿ–4 ಮತ್ತು 5 ಎಂಬುದಾಗಿ ಗುರುತು ಮಾಡಲಾಗಿದ್ದು, ಅವುಗಳು ಪಂಚರಾಗಿ ಸಹಕರಿಸುವಂತೆ ನೀಡಿದ ನೋಟಿಸ್ಸು ಮತ್ತು ಶವ ಪಂಚನಾಮೆ ಆಗಿರುತ್ತದೆ. ನಿಪಿ–4 ಮತ್ತು 5 ರಲ್ಲಿನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ–4(ಬಿ) ಎಂದು, ನಿಪಿ–5 ರಲ್ಲಿನ ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ–5(ಬಿ) ಎಂದು ಗುರುತಿಸಲಾಯಿತು. ಮೃತ ಕಾವೇರಿರವರ ದೇಹವನ್ನು ಪೊಲೀಸರು ಸೋಮವಾರಪೇಟೆಯ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು, ಅಲ್ಲಿ ಪೊಲೀಸರು ಏನು ತನಿಖೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಈಗಾಗಲೇ ಗುರುತು ಮಾಡಿರುವ ನಿಪಿ–2 ನ್ನು ತೋರಿಸಿದ್ದು, ನಿಪಿ–2 ರಲ್ಲಿನ ಫೋಟೋಗಳಲ್ಲಿ ಒಂದು ಫೋಟೋದಲ್ಲಿ ನಾನು ಇದ್ದೇನೆ ಮತ್ತು ಅದರಲ್ಲಿ ಕಾಣುವ ಮೃತ ದೇಹ ಕಾವೇರಿಯದ್ದು ಎಂದು ನುಡಿಯುತ್ತಾರೆ. ನಿಪಿ–2 ನ್ನು ಪೊಲೀಸರು ಶವ ಪಂಚನಾಮೆ ನಿಪಿ–5 ನ್ನು ಜರುಗಿಸುವ ವೇಳೆ ತೆಗೆದಿರುತ್ತಾರೆ. ಸದರಿ ಮೃತ ದೇಹದ ಮೇಲೆ ಯಾವುದೇ ಗಾಯಗಳು ಇರುವುದನ್ನು ನಾನು ನೋಡಿಲ್ಲ. ಪೊಲೀಸರು ಈ ಕುರಿತು ನನ್ನನ್ನು ವಿಚಾರಣೆ ಮಾಡಿಲ್ಲ, ನಾನು ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಮೃತ ಕಾವೇರಿ ತೊಟ್ಟಿದ್ದಳು ಎಂಬ ಬಟ್ಟೆಗಳನ್ನು ತೋರಿಸಲಾಗಿ ಸಾಕ್ಷಿಯು ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ**

**ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ**

2. ಮೃತ ಕಾವೇರಿಗೆ ಆತನ ಗಂಡನಾದ ಸುಬ್ಬಯ್ಯ ಪಿಂಚಣಿ ಹಣ ಬರುತ್ತಿದ್ದು, ಸದರಿ ಎಲ್ಲಾ ಹಣವನ್ನು ಮದ್ಯಪಾನ ಮಾಡುವುದಕ್ಕಾಗಿಯೇ ಉಪಯೋಗಿಸುತ್ತಿದ್ದರು, ಈ ವಿಚಾರಕ್ಕಾಗಿ ಆರೋಪಿಗೂ ಮತ್ತು ಮೃತ ಕಾವೇರಿಗೂ ವಾಗ್ವದ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಕಾವೇರಿ ಮೃತಳಾಗುವುದಕ್ಕಿಂತ ಮುಂಚೆ ನನಗೆ ಹೇಳಿದ್ದಳು ಎಂದರೆ ಸರಿಯಲ್ಲ. ದಿಃ 31-05-2024 ರಂದು ಮೃತ ಕಾವೇರಿ ಮದ್ಯಪಾನ ಮಾಡಿ ಮನೆಯಲ್ಲೇ ರಾತ್ರಿ ಇದ್ದ ಸಂದರ್ಭ ಈ ವಿಚಾರಕ್ಕೆ ಆರೋಪಿ ಮೃತ ಕಾವೇರಿಯನ್ನು ಕುರಿತು ಬಂದ ಪಿಂಚಣಿ ಹಣವನೆಲ್ಲಾ ಮದ್ಯಪಾನ ಮಾಡುವುದಕ್ಕಾಗಿಯೇ ಖರ್ಚು ಮಾಡುತ್ತೀಯಾ ಎಂದು ಗಲಾಟೆ ಮಾಡಿ ಮನೆಯಲ್ಲಿಯೇ ಇದ್ದ ಸೌದೆ ಕೋಲಿನಿಂದ ಕಾವೇರಿಯ ದೇಹದ ಎಲ್ಲಾ ಭಾಗಗಳಿಗೆ ಹಲವಾರು ಬಾರಿ ಜೋರಾಗಿ ಹೊಡೆದು, ಗಾಯ ಪಡಿಸಿ ಸದರಿ ಗಾಯಗಳಿಂದ ಕಾವೇರಿ ಮೃತಳಾಗಿರುತ್ತಾಳೆ ಎಂದರೆ ಸರಿಯಲ್ಲ. ಈದಾದ ನಂತರ ನಾನು ಸುರೇಶನ ಬಳಿ ವಿಚಾರಿಸಿದಾಗ ಆತ ನನ್ನ ಬಳಿ ಕಾವೇರಿ ಮೆಟ್ಟಲಿನಿಂದ ಎಡವಿ ಬಿದ್ದು ಮೃತಳಾಗಿರುತ್ತಾಳೆ ಎಂದು ಸುಳ್ಳು ಮಾಹಿತಿ ನೀಡಿದ್ದ ಎಂದರೆ ಸರಿಯಲ್ಲ.

3. ಸೋಮವಾರಪೇಟೆಯ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಕಾವೇರಿಯ ದೇಹವನ್ನು ನೋಡಿದಾಗ ಸದರಿ ಕಾವೇರಿರವರ ದೇಹದ ಮೇಲೆ ದೊಣ್ಣೆಯಿಂದ ಹಲ್ಲೆ ಮಾಡಿದಾಗ ಆಗುವಂತಹ ಗಾಯಗಳು ಎಡಭಾಗದ ತಲೆ, ಎಡಕಾಲಿಗೆ ರಕ್ತಗಾಯವಾಗಿ, ಎಡ ಮೊಣಕೈ ಊದಿಕೊಂಡಂತೆ ಇದ್ದವು ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎನ್ನುತ್ತಾರೆ. ಈ ಕುರಿತಾಗಿ ದಿಃ 01-06-2024

ರಂದು ಮಧ್ಯಾಹ್ನ ಸುಮಾರು 12.00 ರಿಂದ 2.00 ಗಂಟೆಯವರೆಗೆ ನನ್ನ, ಚಾಸಾ–4 ರವರ ಸಮಕ್ಷಮ ನಿಪಿ–4 ರಂತೆ ನೋಟ್ಟಿಸ್ ನೀಡಿ ನಿಪಿ–5 ರಂತೆ ಶವ ಪಂಚನಾಮೆ ಜರುಗಿಸಿದ್ದರು ಎಂದರೆ ಸರಿಯಲ್ಲ. ಆ ವೇಳೆ ತೆಗೆದ ಫೋಟೋದಲ್ಲಿ ನಾನು ಇದ್ದರೂ ಸಹ ಆರೋಪಿ ನನ್ನ ನೆರೆಹೊರೆಯವರಾದ ಕಾರಣ ಆತನಿಗೆ ಸಹಕರಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಈಗ ನನಗೆ ಓದಿ ಹೇಳಿದಂತೆ ಅಂದರೆ "ಸುಬ್ಬಯ್ಯನವರ ಪೆಂಷನ್ ಹಣ--------------------ಎಂಬುದಾಗಿ ನೀಡಿದ ಹೇಳಿಕೆ" ಎಂದು ಹೇಳಿಕೆಯನ್ನು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಸಾಕ್ಷಿಯ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನಿಪಿ–9 ಎಂದು ಗುರುತಿಸಲಾಯಿತು. ಆರೋಪಿಯೇ ಕಾವೇರಿಯವರನ್ನು ದೊಣ್ಣೆಯಿಂದ ಹೊಡೆದು ಸಾಯಿಸಿರುವ ವಿಚಾರ ಗೊತ್ತಿದ್ದರೂ, ನಿಪಿ–4 ರಿಂದ 6 ಮತ್ತು 9 ರಲ್ಲಿನ ಸಂಗತಿಗಳು ಸತ್ಯ ಎಂದು ಗೊತ್ತಿದ್ದರೂ ಸಹ ಆತ ನನ್ನ ನೆರೆಹೊರೆಯವರಾದ ಆದ ಕಾರಣ ಆತನನ್ನು ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು– ಆರೋಪಿ ಪರ ಶ್ರೀ. ಎಂ.ಬಿ.ಎಸ್ ವಕೀಲರಿಂದಃ**

ಇರುವುದಿಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–xxx

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು–ಮಡಿಕೇರಿ.